**SHIMOGA FOREST DIVISION, SHIMOGA.**

**Phone No:08182-272210, Fax No:08182-225657.**

No A6/BGT/TENDER/CR-08/2019-20 Date:24-07-2019.

# SHORT TERM TENDER NOTIFICATION
# (E- Procurement two cover system)

The Deputy Conservator of Forests, Shimoga Forest Division, Shimoga. invites tender from eligible, reputed and well notified, experienced, Registered Forest Contractors for carrying out Forestry works like ***"EPT works"*** as per Karnataka Transparency in Public Procurements Act (KTPP - 1999 and rules 2000).

The tenderers who have registered their names as Forest Contractor in Shimoga Forest Division and as under e-governance Department of Karnataka may participate through e-tendering system. Tender documents may be downloaded from the e-procurement Website hht://eproc.karnataka.gov.in from 24.07.2019 to 07.08.2019 by 4:30 pm.

The eligible tenderers shall submit their e-tender in **Two Cover System** (Technical and Financial) under e-procurement platform on or before date: 07.08.2019 by 4.30 pm .

- The Technical Tender will be opened on 08.08.2019 at 4:35 pm and
- Financial Bid will be opened on 09.08.2019 at 4.45 pm.

**Further information if any may be obtained from:**

- http://eproc.karnataka.gov.in
- e-procurement help desk contact No: 080 25501216, 080 25501227 [Working Hours Monday to Saturday (Excluding Second Saturday and Fourth Saturday) 10:00 am to 5.30 pm]
- Deputy Conservator of Forests, Shimoga Division, Shimoga. Office Contact Number: 08182 272210.

Sd/-
**Deputy Conservator of Forests,**
Shimoga Division, Shimoga.

## SHIMOGA FOREST DIVISION, SHIMOGA.

## SHORT TERM TENDER NOTIFICATION FOR CARRYING OUT FORESTRY WORKS

- Tender processing fee should be paid electronically to the e-procurement account.
- Certified copies of the relevant documents need to be scanned and attached.
- All the tender documents can be downloaded from the e-procurement website.
  http://eproc.karnataka.gov.in
- e-procurement help desk contact No: 080-25501216, 080-25501227.
- Shimoga Forest Division, Contact No: 08182 272210.
- [Working Hours Monday to Saturday (Excluding Second Saturdays and Sundays) 10:30 am to 5.30 pm].

**The Intending Contractor should be familiar with:**

- The Karnataka Transparency in Public Procurement Act (KTPP Act-1999 and rules-2000) and its relevant amendments from time to time.
- E-procurement procedure.

## Terms and Conditions:

1. The Tenderer should pay 2.5% as EMD and tender processing fee as per e-procurement portal as shown any one of the below
   1. Credit Card 2. Direct Debit 3. NEFT & 4. OTC
2. The Tenderer shall ensure credit of tender processing fee and EMD in a single transaction payment in the respective receiving bank accounts of e-procurement on or before last date of Bid submission. In any case if the Tenderer makes in part payment are liable for rejection.
3. The annual turnover of the tenderer should be above Rs.15.00 Lakhs VAT officer certified document should be submitted.
4. Certified document should be furnished for having paid tax during last 3 financial years.
5. The tender should contain technical and financial bid in a separate format.
6. All the documents should be attested by a Gazetted Officer.
7. The tender is subscribed as ***"To Carry out Forestry works such as (1) EPT works"*** on the tender document.
8. In case the last date falls on Government Holiday, the next working day will be considered as last date:

9.

| Sl. No. | Details | Periods |
|---|---|---|
| 1. | Downloading Tender documents | as per e-portal |
| 2. | For Any Clarifications/ queries etc and | as per e-portal |
| 3. | Receipt of tender details | as per e-portal |
| 4. | Date, Time and Place of opening tender | Technical Bid: as per e-portal |
| | | Financial Bid: as per e-portal . |
| | | Deputy Conservator of forests, Shimoga Division, Shimoga. |

10. Other Terms and Conditions
    - ❖ The Contractor should execute on Rs.200 stamp paper an affidavit stating that he is not black listed for any reason.
    - ❖ The following documents are to be provided with Xerox copies duly attested by Gazetted Officer.
        a) GST
        b) PAN Card
        c) Balance Sheet Statement with minimum turnover of Rs.25.00 Lakhs transaction per year, for the last 3 years.
        d) Work experience certificate issued by the Officer not below the rank of Deputy Conservator of Forests for having carried out the similar type of works in Karnataka Forest Department or any other department of Karnataka State Government, for three years.
        e) Contractor should submit an affidavit address to the conditions imposed from time to time by the Deputy Conservator of Forests, Shimoga and his subordinate Officer's and staff.
        f) Contractor should send personally or send one authorized person with authorized letters during the tender opening time.

11. Within one week from the date of issue of order, the successful tenderer must submit the Security deposit stipulated for each work and execute an Agreement on Rs.200-00 stamp paper for each work, stating that the tenderer will execute the work within the stipulated time as per the terms and conditions.
12. The EMD of unsuccessful Tenderers will be returned by the e-procurement mode.
13. Security Deposit @ 5% in the form of Bank FDR/NSC on the tender value has to be provided while entering into agreement.
14. Works put for tender are seasonal and have to be completed within the time limit as specified in the agreement and work order.
15. No advance payment will be made for the works.

16. If any violation of the above terms and conditions of the contract the tender will be cancelled & balance work will be taken-up departmentally at the risk and cost of the tenderer, and loss if any sustained to department will be paid recovered as "Arrears of land Revenue" as per Karnataka Forest Act & Rules, and land revenue act.
17. For disputes if any, the court at Shimoga shall have jurisdiction to try/ settle the matter.
18. After successful completion of the work, the payment for works will be paid only as per departmental Procedures and check measurement done by the concerned Asst., Conservator of Forests.
19. Tenderer must have registered/ renewed his Name as Forest Contractor in Shimoga Forest Division, in Karnataka Forest Department for the year 2019-20.
20. Tenderer must have at least three years' experience in Forestry works in any of the Forest Division, in Karnataka Forest Department, such as excavation of pits for Raising of polythene bagged seedlings, and related works. in any of the forest division in Karnataka Forest Department work experience certificate should have been obtained from the Officer not below the rank of Deputy Conservator of Forests.
21. Part tender for any work will not be entertained.
22. Tender must be submitted to each work separately through e-portal only.
23. Work spots shown in for new works are tentative and in case of any changes in the work spots will be intimated before issuing work order to the successive tenderer, Extent of area may also change.
24. The Deputy Conservator of Forests, Shimoga Division has reserve the right to accept or reject the tender without giving any reason thereof.
25. Queries and Information regarding the tender (Only in the Office hours.) can be obtained from the Office of the Deputy Conservator of Forests, Shimoga Division, Shimoga.
26. Influence and outside recommendation for granting tender will not be entertained and such efforts will amounts for disqualification.
27. For detailed tender conditions, tenderer can contact the Office of the Deputy Conservator of Forests, Shimoga Division, Shimoga. (Only in the Office hours.)

**Deputy Conservator of Forests,**
Shimoga Division, Shimoga.

**ಕರ್ನಾಟಕ ಸರ್ಕಾರ**
**ಶಿವಮೊಗ್ಗ ಅರಣ್ಯ ವಿಭಾಗ, ಶಿವಮೊಗ್ಗ.**
**ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ.**
**(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)**

---

ಸಂಖ್ಯೆ: ಎ6/ಬಿಜಿಟಿ/ಟೆಂಡರ್/ಸಿಆರ್-08/2019-20 **ದಿನಾಂಕ:24.07.2019.**

2019-20ನೇ ಸಾಲಿನಲ್ಲಿ ಶಿವಮೊಗ್ಗ ಅರಣ್ಯ ವಿಭಾಗದ ಆಗುಂಬೆ ವಲಯ ವ್ಯಾಪ್ತಿಯಲ್ಲಿ ***"ಆನೆ ತಡೆ ಕಂದಕ ಕಾಮಗಾರಿ"*** ನಿರ್ವಹಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2019-20ನೇ ಸಾಲಿಗೆ ಶಿವಮೊಗ್ಗ ಅರಣ್ಯ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಯಿತರಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ಟೆಂಡರಿಗಿಟ್ಟಿರುವ ಕಾಮಗಾರಿಯ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:07.08.2019ರ ಸಂಜೆ 4.30 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ದಿನಾಂಕ: 07.08.2019 ರ ಟೆಂಡರ್‌ನಲ್ಲಿ ಯಾರು ಭಾಗವಹಿಸದ ಸಂದರ್ಭದಲ್ಲಿ Auto Extension ಮೂಲಕ ಮರು ಟೆಂಡರ್ ಅವಧಿಯನ್ನು ದಿನಾಂಕ:14.08.2019ರ ಸಂಜೆ 4.30 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ www.eproc.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಶಿವಮೊಗ್ಗ ವಿಭಾಗ, ಶಿವಮೊಗ್ಗ.

# ಷರತ್ತುಗಳು:

1. ಟೆಂಡರ್‌ದಾರರು ಅವರ ಪೂರ್ತಿ ಹೆಸರು, ಸರಿಯಾದ ಅಂಚೆ ವಿಳಾಸ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ ವಯಸ್ಸು ಮತ್ತು ಇತರ ಎಲ್ಲಾ ರೀತಿಯ ಪೂರ್ಣ ಮಾಹಿತಿಗಳನ್ನು ಟೆಂಡರ್ ಫಾರಂನಲ್ಲಿ ನಮೂದಿಸಿರತಕ್ಕದ್ದು.
2. ಟೆಂಡರಿಗಿಟ್ಟಿರುವ ಕೆಲಸಗಳನ್ನು ನಿರ್ವಹಿಸಲು ಟೆಂಡರಿನಲ್ಲಿ ಭಾಗವಹಿಸುವವರು ಇಂತಹ ಕೆಲಸಗಳನ್ನು ನಿರ್ವಹಿಸಿ ಅನುಭವವಿರುವ ಬಗ್ಗೆ ಅಗತ್ಯ ದೃಡೀಕರಣ ಪತ್ರಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಥವಾ ಅವರ ದರ್ಜೆಗಿಂತ ಹೆಚ್ಚಿನ ದರ್ಜೆಯ ಅಧಿಕಾರಿಗಳಿಂದ ಪಡೆದ ಹಿಂದಿನ 3 ವರ್ಷಗಳ ಪ್ರಮಾಣ ಪತ್ರದ ದೃಡೀಕೃತ ಪ್ರತಿಯನ್ನು ಟೆಂಡರ್ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು.
3. ಪಾಲುದಾರಿಕೆಯಲ್ಲಾಗಲೀ / ಸಂಘ ಸಂಸ್ಥೆಗಳ ಹೆಸರಿನಲ್ಲಾಗಲೀ ಟೆಂಡರ್‌ಗಳನ್ನು ಸಲ್ಲಿಸುವಾಗ ಸಂಸ್ಥೆಯ ಎಲ್ಲಾ ಪಾಲುದಾರರಿಂದ / ಸಂಸ್ಥೆಯಿಂದ ಅಧಿಕಾರ ಪಡೆದ ವ್ಯಕ್ತಿಯು ಜನರಲ್ ಪವರ್ ಆಫ್ ಅಟಾರ್ನಿಯನ್ನು ಸಂಬಂಧಿಸಿದವರಿಂದ ಪಡೆದಿರಬೇಕು, ಸದರಿ ಜನರಲ್ ಪವರ್ ಆಫ್ ಅಟಾರ್ನಿ ಪತ್ರದೊಂದಿಗೆ ಪಾಲುದಾರರ ಸಂಪೂರ್ಣ ಹೆಸರು ಮತ್ತು ವಿಳಾಸವಿರುವ ವಿವರ ಪಾಲುದಾರಿಕೆಯ ಪ್ರಮಾಣವನ್ನು ಸ್ಪಷ್ಟವಾಗಿ ನಮೂದಿಸಿರಬೇಕು, ಸಂಸ್ಥೆಯ ನೊಂದಾಯಿತ ಪತ್ರದ ನಕಲನ್ನು ನ್ಯಾಯಾಧೀಶರು / ಪತ್ರಾಂಕಿತ ಅಧಿಕಾರಿ ಇವರಿಂದ ದೃಢೀಕರಿಸಿರುವ ನೊಂದಾಯಿತ ಪತ್ರದ ನಕಲನ್ನು ಲಗತ್ತಿಸಿರಬೇಕು.
4. ಟೆಂಡರ್‌ದಾರರು 2019-20ನೇ ಸಾಲಿನಲ್ಲಿ ಶಿವಮೊಗ್ಗ ಅರಣ್ಯ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಿರತಕ್ಕದ್ದು.
5. ಟೆಂಡರನ್ನು/ಭಾಗಶ: ಟೆಂಡರನ್ನು ಅಥವಾ ಪೂರ್ಣ ಎಲ್ಲಾ ಟೆಂಡರನ್ನು ಅಂಗೀಕರಿಸುವುದಾಗಲೀ ಮತ್ತು ಅತೀ ಕಡಿಮೆ ಸೂಚಿಸಿದ ಟೆಂಡರನ್ನು ಯಾವುದೇ ಕಾರಣವನ್ನು ನೀಡದೇ ತಿರಸ್ಕರಿಸುವ ಹಕ್ಕನ್ನು ಈ ಕೆಳ ಸಹಿದಾರರು ಕಾಯ್ದಿರಿಸಿಕೊಂಡಿರುತ್ತಾರೆ.
6. ಟೆಂಡರ್‌ನ ಫಲಿತಾಂಶವನ್ನು ಅನುಮೋದನೆಗಾಗಿ ಅಧಿಕಾರವಿರುವ, ಸಂಬಂಧಿಸಿದ ಅಧಿಕಾರಿಗಳ ಅವಗಾಹನೆಗೆ ಸಲ್ಲಿಸಲಾಗುವುದು ಹಾಗೂ ಫಲಿತಾಂಶವನ್ನು ಯಶಸ್ವಿ ಟೆಂಡರ್ ದಾರರಿಗೆ ಅಂಚೆ / ಇ-ಮೇಲ್ ಮೂಲಕ ತಿಳಿಸಲಾಗುವುದು, ಸಕ್ಷಮ ಪ್ರಾಧಿಕಾರದಿಂದ ಟೆಂಡರ್‌ನ ಪಲಿತಾಂಶದ ಬಗ್ಗೆ ಆದೇಶ ಬರುವ ತನಕ ಮೊದಲನೇ ಮತ್ತು ಎರಡನೇ ಕಡಿಮೆ ದರ ನಮೂದಿಸಿರುವ ಟೆಂಡರ್ ದಾರರ ಇ.ಎಂ.ಡಿ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.
7. ಯಶಸ್ವಿ ಟೆಂಡರ್‌ದಾರರು, ಟೆಂಡರ್ ಅಂಗೀಕಾರವಾದ ಪತ್ರ ಸ್ವೀಕರಿಸಿದ ಏಳು ದಿನಗಳೊಳಗಾಗಿ ರೂ. 200.00 ಮುಖ ಬೆಲೆಯ ಛಾಪಾ ಕಾಗದದಲ್ಲಿ ಗುತ್ತಿಗೆ ಕರಾರು ಒಪ್ಪಂದ ಮಾಡಿಕೊಳ್ಳುವುದರ ಜೊತೆಗೆ ಚಾಲ್ತಿ ವರ್ಷದ ಅದಾಯ ತೆರಿಗೆ ಮಾರಾಟ ತೆರಿಗೆ ತೀರುವಳಿ ಪತ್ರಗಳನ್ನು ಕರಾರು ಒಪ್ಪಂದದ ಸಮಯದಲ್ಲಿ ಹಾಜರು ಪಡಿಸತಕ್ಕದ್ದು.
8. ಟೆಂಡರ್‌ದಾರರು ಒಂದು ವೇಳೆ ಕೆಲಸ ನಿರ್ವಹಿಸಲು ನಿಗಧಿತ ಅವಧಿಯೊಳಗೆ ಕರಾರು ಪತ್ರವನ್ನು ಮಾಡಿಕೊಳ್ಳದೇ ಇದ್ದಲ್ಲಿ, ಅವರ ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಮೂಲ ಗುತ್ತಿಗೆದಾರರ ಹೊಣೆಗಾರಿಕೆ ಮತ್ತು ಜವಾಬ್ದಾರಿಯ ಮೇರೆಗೆ ಎರಡನೇ ಕಡಿಮೆ ಟೆಂಡರ್‌ದಾರರ ಮೂಲಕವಾಗಲೀ ಅಥವಾ ಇಲಾಖೆ ಮೂಲಕವಾಗಲೀ ಸಂಧರ್ಭಕ್ಕೆ ತಕ್ಕಂತೆ ಕಾಮಗಾರಿಯನ್ನು ನಿರ್ವಹಿಸಲಾಗುವುದು. ಈ ರೀತಿ ಕಾಮಗಾರಿ ನಿರ್ವಹಿಸಿದ ಸಮಯದಲ್ಲಿ ಸರ್ಕಾರಕ್ಕೆ ಆಗುವ ನಷ್ಟವನ್ನು ಕರ್ನಾಟಕ ಅರಣ್ಯ ಅಧಿ ನಿಯಮ 1963 ಸೆಕ್ಷನ್ 109 ಮತ್ತು 112ರ ಪ್ರಕಾರ ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಎಂದು ಪರಿಗಣಿಸಿ ಮೂಲ ಟೆಂಡರ್‌ದಾರರಿಂದ ಸದರಿ ನಷ್ಟದ ಮೊತ್ತವನ್ನು ವಸೂಲಿ ಮಾಡಲಾಗುವುದು, ಲಾಭಕ್ಕೆ ಮೂಲ ಟೆಂಡರ್ ದಾರರು ಪಾಲುದಾರರಲ್ಲ. ಇಂತಹ ಅನರ್ಹ ಗೊಂಡ ಗುತ್ತಿಗೆದಾರರರ ಹೆಸರನ್ನು ಕಪ್ಪು ಪಟ್ಟಿಗೆ ಸೇರಿಸುವುದರೊಂದಿಗೆ ಅರಣ್ಯ ಗುತ್ತಿಗೆದಾರರ ಹೆಸರನ್ನು ಗುತ್ತಿಗೆದಾರರ ಪಟ್ಟಿಯಿಂದ ಕೈ ಬಿಡಲಾಗುವುದು.

9. ಗುತ್ತಿಗೆದಾರರಿಗೆ ಯಾವುದೇ ರೀತಿಯ ಮುಂಗಡ ಹಣವನ್ನು ಕೆಲಸಕ್ಕಾಗಲೀ ಅಥವಾ ಸಾಮಾಗ್ರಿ ಖರೀದಿಗಾಗಲೀ ನೀಡಲಾಗುವುದಿಲ್ಲ.

10. ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿಯನ್ನು ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳು ಪರಿಶೀಲಿಸಿ ಅಳತೆ ತೆಗೆದುಕೊಳ್ಳುವರು ಮತ್ತು ಅಳತೆ ಪುಸ್ತಕದಲ್ಲಿ ನಮೂದಿಸುವರು ತದ ನಂತರ ಸಂಬಂಧಿಸಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ತಪಾಸಣೆ ನಡೆಸಿ ತಪಾಸಣೆಯ ಫಲಿತಾಂಶವನ್ನು ಅಳತೆಯ ಪುಸ್ತಕದಲ್ಲಿ ನಮೂದಿಸುವರು, ಈ ಅಳತೆಯನ್ನು ಅನುಮೋದಿಸಿದ ಬಗ್ಗೆ ಗುತ್ತಿಗೆದಾರರು ಅಳತೆ ಪುಸ್ತಕದಲ್ಲಿ ತಮ್ಮ ಸಹಿಯನ್ನು ಹಾಕತಕ್ಕದ್ದು, ಆ ನಂತರವೇ ಗುತ್ತಿಗೆದಾರರು ಬಿಲ್ಲನ್ನು ತಯಾರಿಸಿ ವಲಯ ಅರಣ್ಯಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು, ವಲಯ ಅರಣ್ಯಾಧಿಕಾರಿಗಳು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಅನುಮೋದನೆ ಪಡೆದು ಹಣ ಪಾವತಿಗಾಗಿ ವಿಭಾಗ ಕಚೇರಿಗೆ ಸಲ್ಲಿಸುವರು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ ಇವರು ಸಹ ಕಾಮಗಾರಿಯನ್ನು ಸ್ವತ: ಪರಿಶೀಲಿಸಿದ ನಂತರ ಬಿಲ್ಲಿನ ಮೊತ್ತವನ್ನು ಅನುದಾನದ ಲಭ್ಯತೆಯ ಆಧಾರದ ಮೇಲೆ ಪಾವತಿಸಲಾಗುವುದು, ಈ ರೀತಿ ಪಾವತಿಸುವಾಗ ನಿಗಧಿತ ದರದಲ್ಲಿ ಅದಾಯ ತೆರಿಗೆ, ಮಾರಾಟ ತೆರಿಗೆ ರಾಯಲ್ಟಿ ಹಾಗೂ ಭದ್ರತಾ ಠೇವಣಿಯನ್ನು ಬಿಲ್ಲಿನಲ್ಲಿ ನಿಯಮಾನುಸಾರ ಕಟಾಯಿಸಲಾಗುವುದು, ಎಲ್ಲಾ ಕಾಮಗಾರಿಗಳ ಬಾಬ್ತು ಒಂದೇ ಬಿಲ್ಲನ್ನು ಕಾಮಗಾರಿ ಪೂರ್ಣಗೊಂಡ ನಂತರ ತಯಾರಿಸಿ ಸಲ್ಲಿಸತಕ್ಕದ್ದು ಭಾಗಶ: ಬಿಲ್ಲನ್ನು ಪಾವತಿಸಲಾಗುವುದಿಲ್ಲ.

11. ಗುತ್ತಿಗೆದಾರರ ಟೆಂಡರ್‌ದಾರರು ನಿರ್ವಹಿಸುವ ಕೆಲಸದ ಪ್ರಗತಿಯು ತೃಪ್ತಿದಾಯಕವಾಗಿಲ್ಲವೆಂದು ಕಂಡುಬಂದಲ್ಲಿ ಗುತ್ತಿಗೆದಾರರಿಗೆ ಏಳು ದಿನಗಳ ಕಾಲಾವಧಿಯ ಲಿಖಿತ ನೋಟೀಸು ನೀಡಿ, ನಂತರ ಗುತ್ತಿಗೆಯನ್ನು ರದ್ದು ಪಡಿಸಿ, ಗುತ್ತಿಗೆದಾರರ ಜವಾಬ್ದಾರಿಯ ಮೇಲೆ ಎರಡನೇ ಕಡಿಮೆ ದರ ಸೂಚಿಸಿದ ಟೆಂಡರ್‌ದಾರರ ಮೂಲಕ ಅಥವಾ ಇಲಾಖಾ ಮುಖಾಂತರ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವಿಭಾಗ, ಶಿವಮೊಗ್ಗ ರವರು ಅಧಿಕಾರವನ್ನು ಹೊಂದಿರುತ್ತಾರೆ.

12. ಒಂದು ವೇಳೆ ಗುತ್ತಿಗೆದಾರರಿಗೆ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವಿಭಾಗ, ಶಿವಮೊಗ್ಗ ಇವರೊಂದಿಗೆ ಪರಸ್ಪರ ಬಿನ್ನಾಭಿಪ್ರಾಯ ಉಂಟಾದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವೃತ್ತ, ಶಿವಮೊಗ್ಗ ಇವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

13. ಲೋಕೋಪಯೋಗಿ ಇಲಾಖೆ ಮತ್ತು ಕರ್ನಾಟಕ ಅರಣ್ಯ ಇಲಾಖೆಯ ಕಾಯಿದೆ ಕಾನೂನುಗಳ ಪ್ರಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಶಿವಮೊಗ್ಗ ವಿಭಾಗ, ಶಿವಮೊಗ್ಗ ಇವರು ಕೈಗೊಳ್ಳುವ ತೀರ್ಮಾನಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

14. ಅನುಸೂಚಿಯಲ್ಲಿ ತಿಳಿಸಿರುವ ಕಾಮಗಾರಿಯ ಪ್ರಮಾಣವು ಅಂದಾಜಿನದ್ದಾಗಿದ್ದು, ಇದನ್ನು ಅಗತ್ಯ ಕಂಡು ಬಂದಾಗ ಬದಲಾವಣೆ ಮಾಡುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾದಿಕಾರಿಗಳು, ಶಿವಮೊಗ್ಗ ವಿಭಾಗ, ಶಿವಮೊಗ್ಗ ಇವರು ಹೊಂದಿರುತ್ತಾರೆ.

15. ಟೆಂಡರ್‌ಗಾಗಿ ಪ್ರಕಟಪಡಿಸಿರುವ ಕಾಮಗಾರಿಗಳಲ್ಲಿ ಯಾವುದೇ ಕೆಲಸದ ಕಾಮಗಾರಿಯನ್ನು ಕಾಯ್ದಿರಿಸುವ ಹಾಗೂ ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಸಂದರ್ಭಾನುಸಾರ ಯಾವುದೇ ಕೆಲಸಗಳನ್ನು ಹೊಸದಾಗಿ ಸೇರಿಸುವ/ಬದಲಾಯಿಸಯವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾದಿಕಾರಿಗಳು, ಶಿವಮೊಗ್ಗ ವಿಭಾಗ, ಶಿವಮೊಗ್ಗರವರು ಹೊಂದಿರುತ್ತಾರೆ.

16. ಯಾವುದೇ ಕಾರಣವಿಲ್ಲದೆ ಟೆಂಡರ್‌ಗಾಗಿ ಪ್ರಕಟಪಡಿಸಿರುವ ಕಾಮಗಾರಿಗಳಲ್ಲಿ ಭಾಗಶ: ಅಥವಾ ಪೂರ್ಣ ಹಾಗೂ ಯಾವುದೇ ಕಾಮಗಾರಿಯನ್ನು ಕೈ ಬಿಡುವ ಅಧಿಕಾರವನ್ನು ಸಹ ಉಪ ಅರಣ್ಯ ಸಂರಕ್ಷಣಾದಿಕಾರಿಗಳು, ಶಿವಮೊಗ್ಗ ವಿಭಾಗ, ಶಿವಮೊಗ್ಗ ರವರು ಹೊಂದಿರುತ್ತಾರೆ.

17. ಟೆಂಡರ್‌ಗಾಗಿ ಪ್ರಕಟಪಡಿಸಿರುವ ಕಾಮಗಾರಿಗಳಲ್ಲಿ ಕಾಮಗಾರಿಗಳ ಸ್ಥಳದ ಬದಲಾವಣೆಯನ್ನು ಮಾಡುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವಿಭಾಗ, ಶಿವಮೊಗ್ಗ ರವರು ಹೊಂದಿರುತ್ತಾರೆ ಮತ್ತು ಇಂತಹ ಸಂದರ್ಭಗಳಲ್ಲಿ ಗುತ್ತಿಗೆದಾರರಿಗೆ ಹೆಚ್ಚುವರಿ ಹಣವನ್ನು ನೀಡಲಾಗುವುದಿಲ್ಲ.

18. ಗುತ್ತಿಗೆದಾರರು ಕೆಲಸದ ನಮೂನೆ ಕೆಲಸವನ್ನು ಪ್ರಾರಂಭಿಸಿದ ದಿನಾಂಕ, ಮುಕ್ತಾಯದ ದಿನಾಂಕದ ಚಾರ್ಟನ್ನು ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

19. ಕಾಮಗಾರಿಗೆ ಬೇಕಾಗುವ ಅಂದಾಜು ಪಟ್ಟಿ ವಿನ್ಯಾಸ ದರಗಳು ಮುಂತಾದ ದಾಖಲಾತಿಗಳ ಅಧಿಕೃತ ಪ್ರತಿಗಳನ್ನು ಉಪ ಅರಣ್ಯ ಸಂರಕ್ಷಣಾದಿಕಾರಿಗಳು, ಶಿವಮೊಗ್ಗ ವಿಭಾಗ, ಶಿವಮೊಗ್ಗ ಇವರ ಕಚೇರಿಯಲ್ಲಿ ಕಚೇರಿ ಕೆಲಸದ ವೇಳೆಯಲ್ಲಿ ಟೆಂಡರ್‌ದಾರರು ಪರಿಶೀಲಿಸಬಹುದಾಗಿದೆ ಹಾಗೇ ಪರಿಶೀಲನೆಗೆ ಪ್ರದರ್ಶಿಸಿದ ದಾಖಲಾತಿಗಳನ್ನು ಪರಿಶೀಲಿಸುವ ಕುರಿತು ಕಚೇರಿಯಲ್ಲಿ ಇಡಲಾಗಿರುವ ಪುಸ್ತಕದಲ್ಲಿ ಪರಿಶೀಲನೆ ನಡೆಸಿದ ದಿನಾಂಕದೊಂದಿಗೆ ಅವರ ಸಹಿ ಮಾಡುವುದು ಪ್ರದರ್ಶಿಸಿದ ಕೆಲಸದ ವಿವರವು ಅಂದಾಜಿನದ್ದಾಗಿರುತ್ತದೆ ಎಂಬುದನ್ನು ಟೆಂಡರ್‌ದಾರರು ತಿಳಿಯತಕ್ಕದ್ದು ಅಂದಾಜು ಪಟ್ಟಿ ಮತ್ತು ವಿನ್ಯಾಸದಂತೆ ಕಾಮಗಾರಿಗಳನ್ನು ನಿರ್ವಹಿಸತಕ್ಕದ್ದು ಹಾಗೂ ಕಾಮಗಾರಿ ಬಗ್ಗೆ ತಾಂತ್ರಿಕ ಪರಿಣತೆ ಹೊಂದಿದ ಉಸ್ತುವಾರಿದಾರರು ಮತ್ತು ಕೆಲಸಗಾರರನ್ನು ಮಾತ್ರ ನೇಮಿಸಿಕೊಳ್ಳತಕ್ಕದ್ದು.

20. ಗುತ್ತಿಗೆದಾರರು ಅವರ ಅಧೀನದಲ್ಲಿ ಕೆಲಸ ಮಾಡುವ ಕೆಲಸಗಾರರ ಯೋಗಕ್ಷೇಮ ನೋಡಿಕೊಳ್ಳುವುದು ಹಾಗೂ ಅಪಘಾತಗಳಿಗೆ ಪರಿಹಾರ ಕಾಯಿದೆ ಅನ್ವಯ ಪರಿಹಾರವನ್ನು ನೀಡಲು ಬದ್ಧರಾಗಿರಬೇಕು. ತಪ್ಪಿದಲ್ಲಿ ಸಂಬಂಧಿಸಿದವರಿಂದ ಆದೇಶವಾದ ಅಂತಹ ಪರಿಹಾರ ಮೊತ್ತವನ್ನು, ಕಾಮಗಾರಿ ನಿರ್ವಹಿಸಿದ ಬಾಬ್ತು ಟೆಂಡರ್‌ದಾರರು ಸಲ್ಲಿಸಿದ ಬಿಲ್ಲಿನಲ್ಲಿ ಕಟಾಯಿಸಿ ಅಪಘಾತಕ್ಕೆ ಒಳಗಾದ ವ್ಯಕ್ತಿಗೆ ಪಾವತಿಸಲಾಗುವುದು. ಕಾಮಗಾರಿಗೆ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಬಾಲ ಕಾರ್ಮಿಕರ ರಕ್ಷಣಾ ಅಧಿನಿಯಮದನ್ವಯ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

21. ಗುತ್ತಿಗೆದಾರರು ತಮ್ಮ ಪ್ರತಿನಿಧಿ ಹಾಗೂ ಕಾರ್ಮಿಕರ ಯಾದಿಯನ್ನು, ಕಾರ್ಮಿಕರ ದೃಢೀಕರಿಸಿದ ಭಾವ ಚಿತ್ರದೊಂದಿಗೆ ಅವರುಗಳ ಅಂಚೆ ವಿಳಾಸ ನಮೂದಿಸಿ ಕಾಮಗಾರಿ ಪಾರಂಭಕ್ಕೆ ಮುಂಚೆಯೇ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಕಾಮಗಾರಿ ಸ್ಥಳದಲ್ಲಿ, ಕಾಮಗಾರಿ ನಿರ್ವಹಿಸುವ ಕಾರ್ಮಿಕರು ಅವರ ದೃಢೀಕೃತ ಭಾವಚಿತ್ರವುಳ್ಳ ಗುತ್ತಿಗೆದಾರರ ಸಹಿ ಇರುವ ಗುರುತಿನ ಚೀಟಿ ಹೊಂದಿರಬೇಕು. ಕಾಮಗಾರಿಯನ್ನು ಸಾಮಾನ್ಯ ಕೆಲಸದ ವೇಳೆಯಾದ ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 5.30 ಗಂಟೆಯವರೆಗೆ ಮಾತ್ರ ನಿರ್ವಹಿಸತಕ್ಕದ್ದು.

22. ಗುತ್ತಿಗೆದಾರರು ಕಾಮಗಾರಿಗೆ ಉಪಯೋಗಿಸಲು ದಾಸ್ತಾನು ಮಾಡುವ ಎಲ್ಲಾ ರೀತಿಯ ಸರಕು ಸಾಮಗ್ರಿಗಳ, ಯಂತ್ರೋಪಕರಣಗಳ ಹಾಗೂ ವಾಹನಗಳ ಸಂಪೂರ್ಣ ಸುರಕ್ಷತೆಯನ್ನು ಗುತ್ತಿಗೆದಾರರೇ ನಿರ್ವಹಿಸತಕ್ಕದ್ದು. ಬೆಂಕಿ ಅಪಘಾತ, ಕಳ್ಳತನ ಮತ್ತಿತರ ಯಾವುದೇ ರೀತಿಯ ನಷ್ಟ ಉಂಟಾದಲ್ಲಿ ಟೆಂಡರ್‌ದಾರರೆ ಸಂಪೂರ್ಣ ಹೊಣೆಗಾರರಾಗಿರುತ್ತಾರೆ. ಇಲಾಖೆಯು ಟೆಂಡರ್‌ದಾರರ ಸಾಮಾಗ್ರಿ ಯಂತ್ರೋಪಕರಣಗಳ ಸುರಕ್ಷತೆಯ ಯಾವುದೇ ಹೊಣೆಯನ್ನು ಹೊರುವುದಿಲ್ಲ. ಹಾಗೂ ಯಾವುದೇ ರೀತಿಯ ಪರಿಹಾರವನ್ನು ಭರಿಸುವುದಿಲ್ಲ.

23. ಕಾಮಗಾರಿಗಳಿಗೆ ಸಂಬಂಧಿಸಿದ ವಾಹನಗಳ ಸಂಚಾರವನ್ನು ನಿಗಧಿಪಡಿಸಿದ ಮಾರ್ಗದಲ್ಲಿ ಹಾಗೂ ವೇಳೆಯಲ್ಲಿ ಮಾತ್ರ ಸಂಚರಿಸಲು ಅವಕಾಶವಿರುತ್ತದೆ ಮತ್ತು ಶಬ್ದ ಮಾಲಿನ್ಯ ಮಾಡದಂತಹ ವಾಹನಗಳನ್ನು ಮಾತ್ರ ಉಪಯೋಗಿಸಬೇಕು, ಶಬ್ದ ಮಾಲಿನ್ಯ ವಾಹನಗಳ ಪ್ರವೇಶವನ್ನು ನಿಷೇಧಿಸಿದೆ. ಕಾಮಗಾರಿ ಕೆಲಸದ ಸಮಯದಲ್ಲಿ ವನ್ಯ ಪ್ರಾಣಿಗಳಿಗಾಗಲೀ, ಪಕ್ಷಿಗಳಿಗಾಗಲೀ, ಮರ ಗಿಡಗಳಿಗಾಗಲೀ ಯಾವುದೇ ರೀತಿಯ ಹಾನಿಯಾಗದಂತೆ ಎಚ್ಚರ ವಹಿಸತಕ್ಕದ್ದು. ಕಾಮಗಾರಿ ಸ್ಥಳದಲ್ಲಿ ಅಥವಾ ಯಾವುದೇ ಮರಗಳನ್ನು ಕಡಿಯತಕ್ಕದ್ದಲ್ಲ ಹಾಗೂ ಅರಣ್ಯಕ್ಕೆ ಬೆಂಕಿ ಕೊಡುವುದನ್ನು ನಿಷೇಧಿಸಲಾಗಿದೆ. ಅರಣ್ಯ ಅಧಿನಿಯಮ 1963 ಅರಣ್ಯ ನಿಯಮಾವಳಿ 1969, ಅರಣ್ಯ ಸಂರಕ್ಷಣಾ ಕಾಯಿದೆ 1980,

ವನ್ಯಜೀವಿ ಸಂರಕ್ಷಣಾ ಕಾಯಿದೆ 1972 ಹಾಗೂ ಕಾಲ ಕಾಲಕ್ಕೆ ಅರಣ್ಯ ಇಲಾಖೆಯಿಂದ ಹಾಗೂ ಸರ್ಕಾರದಿಂದ ಹೊರಡಿಸುವ ಆದೇಶಗಳು ಇವುಗಳಲ್ಲಿ ಕಲ್ಪಿಸಿರುವ ಅವಕಾಶಗಳನ್ನು ಗುತ್ತಿಗೆದಾರರು ಕಡ್ಡಾಯವಾಗಿ ಪಾಲಿಸತಕ್ಕದ್ದು.

24. ಟೆಂಡರ್‌ದಾರರು ಸಾಕಷ್ಟು ಹಣಕಾಸಿನ ಸೌಲಭ್ಯ ಹೊಂದಿದವರಾಗಿದ್ದು, ಇಲಾಖೆಯಿಂದ ಕೆಲಸ ಪೂರ್ಣಗೊಳಿಸುವ ಅವಧಿಯಲ್ಲಿ ಹಣಪಾವತಿಯಾಗಲು ವಿಳಂಬವಾದರೂ ಸಹ ಸದರಿ ಕೆಲಸವನ್ನು ನಿಗಧಿಪಡಿಸಿದ ಕಾಲಾವದಿಯೊಳಗೆ ಪೂರೈಸಲು ಸಮರ್ಥರಿರಬೇಕು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಗಳು, ಟೆಂಡರ್ ದರಕ್ಕೆ ಅನುಗುಣವಾಗಿ ಹೆಚ್ಚಿನ ಭದ್ರತಾ ಠೇವಣಿಯನ್ನು ನಿಗಧಿಪಡಿಸಿದ್ದಲ್ಲಿ, ಅಷ್ಟೂ ಮೊತ್ತದ ಭದ್ರತಾ ಠೇವಣಿಯನ್ನು ಕರಾರು ಪತ್ರ ಮಾಡಿಕೊಳ್ಳುವ ಸಮಯದಲ್ಲಿ ತುಂಬಿ / ಹಾಜರುಪಡಿಸಿ ಕರಾರು ಒಪ್ಪಂದದ ಪತ್ರವನ್ನು ಮಾಡಿಸಿಕೊಳ್ಳಲು ಬದ್ಧರಾಗಿರತಕ್ಕದ್ದು. ಹಾಗೂ ಈ ಮೊತ್ತವನ್ನು ಕಾಮಗಾರಿ ಪೂರ್ಣಗೊಂಡ ನಂತರ ಸಂಬಂಧಿಸಿದ ಅಧಿಕಾರಿಗಳ ಸಮಾಪನಾ ವರದಿ ಪಡೆದು ಹಿಂದಿಗುರಿಸಲಾಗುವುದು.

25. ಗುತ್ತಿಗೆದಾರರು ಗುತ್ತಿಗೆಯನ್ನು ಅಥವಾ ಗುತ್ತಿಗೆಯ ಯಾವುದೇ ಭಾಗವನ್ನು ಇತರರಿಗೆ ಉಪ ಗುತ್ತಿಗೆ ನೀಡುವಂತಿಲ್ಲ ಅಥವಾ ವರ್ಗಾಯಿಸುವಂತಿಲ್ಲ. ಗುತ್ತಿಗೆದಾರರ ಬೇಡಿಕೆಯಂತೆ ಗುತ್ತಿಗೆಯನ್ನು ಬೇರೆಯವರಿಗೆ ವರ್ಗಾಯಿಸಬೇಕಾದರೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವೃತ್ತ, ಶಿವಮೊಗ್ಗ ರವರ ಅನುಮತಿಯನ್ನು ಪಡೆದು ಗುತ್ತಿಗೆ ದರದ ಶೇಕಡಾ 10 ರಷ್ಟು ದರವನ್ನು ಸರ್ಕಾರಕ್ಕೆ ಜಮಾ ಮಾಡಿ ನಂತರ ವರ್ಗಾಯಿಸತಕ್ಕದ್ದು. ಈ ರೀತಿ ಉಪ ಗುತ್ತಿಗೆ ಪಡೆದವರು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವಿಭಾಗ, ಶಿವಮೊಗ್ಗ ಇವರಲ್ಲಿ ಪ್ರತ್ಯೇಕ ಕರಾರು ಪತ್ರವನ್ನು ಬರೆದು ಕೊಡತಕ್ಕದ್ದು.

26. ಕಾಮಗಾರಿಗಳನ್ನು ಸಮರ್ಪಕವಾಗಿ ಹಾಗೂ ತೃಪ್ತಿಕರವಾಗಿ ನಿರ್ವಹಿಸಿದ ಬಗ್ಗೆ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳಿಂದ ನಿಗಧಿತ ನಮೂನೆಯಲ್ಲಿ ಕಾಮಗಾರಿಯ ಸಮಾಪನಾ ವರದಿ ಬಂದನಂತರ ಭದ್ರಾತಾ ಠೇವಣಿಯನ್ನು ಗುತ್ತಿಗೆದಾರರಿಗೆ ಹಿಂದಿರುಗಿಸಲಾಗುವುದು. ಕಾಮಗಾರಿ ಮುಕ್ತಾಯಗೊಂಡ ಒಂದು ವರ್ಷದ ಒಳಗೆ, ನಿರ್ವಹಿಸಿದ ಕಾಮಗಾರಿಯಲ್ಲಿ ಏನಾದರೂ ನ್ಯೂನತೆ ಕಂಡುಬಂದಲ್ಲಿ, ಅಂತಹ ಕಾಮಗಾರಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವಿಭಾಗ, ಶಿವಮೊಗ್ಗ ಇವರ ಸೂಚನೆಯಂತೆ ಸರಿಪಡಿಸಿ ಕೊಡತಕ್ಕದ್ದು. ಒಂದು ವೇಳೆ ನ್ಯೂನತೆಯನ್ನು ಸರಿಪಡಿಸಿ ಕೊಡದಿದ್ದಲ್ಲಿ, ಗುತ್ತಿಗೆದಾರರು ಅರಣ್ಯ ಇಲಾಖೆಯ ಯಾವುದೇ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದರೂ ಸಹ ಅಂತಹ ವಿಭಾಗಗಳಿಗೆ ಪತ್ರ ಬರೆದು, ಆಗಿರುವ ನಷ್ಟವನ್ನು ಗುತ್ತಿಗೆದಾರರ ಬಿಲ್ಲಿನಲ್ಲಿ ಕಟಾಯಿಸುವಂತೆಯೂ ಅಥವಾ ಅಲ್ಲಿ ಒದಗಿಸಿದ ಭದ್ರತಾ ಠೇವಣಿಯಿಂದ ವಸೂಲು ಮಾಡುವಂತೆಯೂ ಕ್ರಮ ತೆಗೆದುಕೊಳ್ಳಲಾಗುವುದು. ಭದ್ರತಾ ಠೇವಣಿಯನ್ನು ಹಿಂದಕ್ಕೆ ಪಡೆಯುವಾಗ ಸದರಿ ಷರತ್ತಿಗೆ ಒಪ್ಪಿ, ಈ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವಿಭಾಗ, ಶಿವಮೊಗ್ಗ ಇವರಿಗೆ ಮುಚ್ಚಳಿಕೆ ಪತ್ರ ಬರೆದುಕೊಡತಕ್ಕದ್ದು.

27. ಗುತ್ತಿಗೆದಾರರು ಮೇಲೆ ಹೇಳಿದ ಎಲ್ಲಾ ಷರತ್ತುಗಳಿಗೂ ಬದ್ಧರಾಗಿರಬೇಕು. ಉಲ್ಲಂಘಿಸಿದಲ್ಲಿ ಅಂತಹವರ ಗುತ್ತಿಗೆಯನ್ನು ಭಾಗಶ: ಅಥವಾ ಪೂರ್ಣವಾಗಿ ರದ್ದುಗೊಳಿಸುವ, ಠೇವಣಿ ಮುಟ್ಟುಗೋಲು ಹಾಕಿಕೊಳ್ಳುವ/ಬಿಲ್ ಪಾವತಿ ತಡೆಹಿಡಿಯುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವಿಭಾಗ, ಶಿವಮೊಗ್ಗ ಇವರಿಗೆ ಇರುತ್ತದೆ. ಹಾಗೂ ಉಲ್ಲಂಘನೆಯಿಂದ ಸರ್ಕಾರಕ್ಕೇನಾದರೂ ನಷ್ಟ ಸಂಭವಿಸಿದಲ್ಲಿ ಅದನ್ನು ಭದ್ರತಾ ಠೇವಣಿಯಿಂದ ಹೊಂದಾಣಿಕೆ ಮಾಡಿಕೊಳ್ಳಲಾಗುವುದು ಮತ್ತು ಹೆಚ್ಚುವರಿ ಮೊತ್ತವನ್ನು ಕಂದಾಯ ಬಾಕಿ ಎಂದು ವಸೂಲಿ ಮಾಡಲಾಗುವುದು.

28. ಈ ಕಾಮಗಾರಿ ಬಾಬ್ತು ಏನಾದರೂ ವಿವಾದ ಉಂಟಾದಲ್ಲಿ ಈ ವಿವಾದವು ಶಿವಮೊಗ್ಗ ನಗರದ ನ್ಯಾಯಾಲಯದ ವ್ಯಾಪ್ತಿಗೆ ಸೀಮಿತವಾಗಿದೆ.

29. ಗುತ್ತಿಗೆಯ ಈ ಷರತ್ತುಗಳಲ್ಲದೆ ಬೇರಾವುದೇ ಷರತ್ತನ್ನು ಕರಾರು ಪತ್ರಕ್ಕೆ ಯಾವುದೇ ಸಮಯದಲ್ಲಿ ಸೇರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

30. ಸದರಿ ಟೆಂಡರ್‌ನಲ್ಲಿ ನಿಗದಿಪಡಿಸಿರುವ ಕಾಮಗಾರಿಗಳು ಮೇಲಾಧಿಕಾರಿಗಳಿಂದ ಬಿಡುಗಡೆಯಾಗುವ ಅನುದಾನದ ಮಿತಿಗೆ ಒಳಪಟ್ಟಿದ್ದು, ಒಂದು ವೇಳೆ ಅನುದಾನ ಬಿಡುಗಡೆಯಾಗದಿದ್ದಲ್ಲಿ ಅಥವಾ ಕಡಿಮೆ ಅನುದಾನ ಬಿಡುಗಡೆಯಾದಲ್ಲಿ ಸದರಿ ಕಾಮಗಾರಿಗಳನ್ನು ರದ್ದುಪಡಿಸುವ ಅಥವಾ ಭಾಗಶಃ ಕಡಿಮೆ ಮಾಡುವ ಅಧಿಕಾರಿವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹೊಂದಿರುತ್ತಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಶಿವಮೊಗ್ಗ ವಿಭಾಗ, ಶಿವಮೊಗ್ಗ.